ಜೊಲ್ಲೆ ಗ್ರೂಪ್

ವಾರ್ತಾ ಪತ್ರ

(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)

ಆಗಸ್ಟ 2023-ಸಂಪುಟ-7 ಸಂಚಿಕೆ-09


# ದರ್ಪಣ



ನವದೆಹಲಿಯಲ್ಲಿ ಕೇಂದ್ರ ಶಿಕ್ಷಣ ಇಲಾಖೆಯ ರಾಜ್ಯ ಖಾತೆ ಸಚಿವರಾದ ಶ್ರೀಮತಿ ಅನ್ನಪೂರ್ಣಾದೇವಿ ಅವರನ್ನು ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಹಾಗೂ ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು ಸೌಹಾರ್ದಯುತವಾಗಿ ಭೇಟಿ ಮಾಡಿದರು.

ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ)

ಕ್ರೀಯಾತ್ಮಕ ಹಾಗೂ ಪ್ರಗತಿಶೀಲ ಅರ್ಥವ್ಯವಸ್ಥೆ




## ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಪ್ರೇರಕ ಶಕ್ತಿಯಾಗಿ ಸ್ಪಂದಿಸುತ್ತಿರುವ

# ನಮ್ಮ ಹೆಮ್ಮೆಯ ಜೊಲ್ಲೆ ಶಿಕ್ಷಣ ಸಂಸ್ಥೆ

ಬಹುಮುಖ ಚಿಂತನೆಗಳು, ನಾವಿನ್ಯತೆ, ಹೊಸತನ, ಹೊಂದಾಣಿಕೆ ಹಾಗೂ ಸ್ವಂತಿಕೆ ಹೀಗೆ ಹತ್ತು ಹಲವಾರು ಚಿಂತನೆಗಳಿಗೆ ನಿರಂತರವಾಗಿ ಒತ್ತು ನೀಡುವ ಈ ಭಾಗದ ಏಕಮೇವ ಸಂಸ್ಥೆಯೇ ಜೊಲ್ಲೆ ಶಿಕ್ಷಣ ಸಂಸ್ಥೆ ಎಂದರೆ ಅತಿಶಯೋಕ್ತಿ ಯಾಗಲಾರದು. ಆರೋಗ್ಯಕರ ಹವ್ಯಾಸಗಳನ್ನು ಬೆಳೆಸುವುದರ ಜೋತೆಗೆ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪಾಲಕರಲ್ಲಿ ಆದರ್ಶದ ಮೌಲ್ಯಗಳನ್ನು ಅಂತರ್ಗತಗೊಳಿಸುವಲ್ಲಿ ಸಂಸ್ಥೆಯ ಪಾತ್ರ ಹಿರಿದಾಗಿದೆ. ಅಗತ್ಯತೆಗಳು, ಪ್ರಚೋದಕಗಳು, ಅಭಿಪ್ರೇರಕಗಳು, ಸಂವೇಗಗಳು, ಉದ್ದೀಪನಗಳು, ಅಭಿವೃತ್ತಿಗಳು, ಪ್ರವೃತ್ತಿಗಳು, ಮೌಲ್ಯಗಳು, ಅಭಿರುಚಿ ಮತ್ತು ಆಸಕ್ತಿಗಳು, ಆತ್ಮವಿಶ್ವಾಸ, ಸಹೋದರತ್ವದ ಪರಿಕಲ್ಪನೆಗಳು ಹಾಗೂ ವಿಕಾಸದ ಚಿಂತನೆಗಳು ಜೊತೆಗೆ ಅತ್ಯುತ್ತಮ ಸಂಪನ್ಮೂಲಗಳಂತಹ ಮೂಲ ಅಭಿಪ್ರೇರಣಾ ಪರಿಕಲ್ಪನೆಗಳಿಗೆ ಹೆಚ್ಚಿನ ಆಧ್ಯತೆ ನೀಡಿ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪಾಲಕರ ಸರ್ವತೋಮುಖ ಪ್ರಗತಿಗಾಗಿ ನಮ್ಮ "ಜೊಲ್ಲೆ ಶಿಕ್ಷಣ ಸಂಸ್ಥೆ" ನಿರಂತರ ಶ್ರಮಿಸುತ್ತಿದೆ.

ವಿದ್ಯಾರ್ಥಿಗಳ ವರ್ತನೆಗಳಲ್ಲಿ ಪರಿವರ್ತನೆಗಳನ್ನು ಉಂಟು ಮಾಡುವ ವಿವಿಧ ರಚನಾತ್ಮಕ ಕಾರ್ಯಗಳು, ವೈವಿದ್ಯಮಯ ಸ್ಪರ್ಧೆಗಳನ್ನು ಹಮ್ಮಿಕೊಳ್ಳುತ್ತಾ ಗುರಿತಲುಪಲು ಸಂಸ್ಥೆ ಪ್ರೇರಕ ಶಕ್ತಿಯಾಗಿದೆ. ವಿದ್ಯಾರ್ಥಿಗಳಲ್ಲಿ ಅಡಿಗಿರುವ ಪ್ರತಿಭೆ ಹಾಗೂ ಆಂತರಿಕ ಶಕ್ತಿ ಮತ್ತು ಸಾಮರ್ಥ್ಯಗಳ ಅನಾವರಣ ಮಾಡುವ ಶ್ರೇಷ್ಠ ಕಾರ್ಯ ಮಾಡುತ್ತಿರುವುದು ಗಮನಾರ್ಹವಾಗಿದೆ. ತಾರತಮ್ಯತೆ, ಲಿಂಗಬೇಧ, ವರ್ಗ ತಾರತಮ್ಯತೆಗಳಿಗೆ ಕಿಂಚಿತ್ತೂ ಅವಕಾಶಕೊಡದೆ "ಸರ್ವೇಜನಃ ಸುಖಿನೋಭವಂತು" ಎಂಬ ತತ್ವದಡಿಯಲ್ಲಿ ಸ್ಪರ್ಧಾತ್ಮಕ ಮನೋಭಾವನೆ, ವ್ಯಕ್ತಿತ್ವ ವಿಕಾಸದ ಮನೋಧೋರಣೆಗಳನ್ನು ಬೆಳೆಸುವ ಮಹಾದಾಸೆಯನ್ನು, ಮಹತ್ವಾಕಾಂಕ್ಷೇಯನ್ನು ಹೊಂದಿರುವ ಜನಪ್ರಿಯ ಸಂಸದ ಹಾಗೂ ಸಂಸ್ಥೆಯ ಸಂಸ್ಥಾಪಕರಾದ ಶ್ರೀ. ಅಣ್ಣಾಸಾಹೇಬ ಜೊಲ್ಲೆ ಹಾಗೂ ಜನಪ್ರಿಯ ಶಾಸಕರು ಹಾಗೂ ಸಹಸಂಸ್ಥಾಪಕರಾದ ಸೌ. ಶಶಿಕಲಾ ಜೊಲ್ಲೆ ಅದೇ ರೀತಿ ಜೊಲ್ಲೆ ಸಂಸ್ಥೆಯ ಪ್ರೇರಣಾ ಶಕ್ತಿಯಾದ ಶ್ರೀ. ಜೋತಿಪ್ರಸಾದ ಜೊಲ್ಲೆ ಮತ್ತು ಯುವಶಕ್ತಿಯಾದ ಶ್ರೀ. ಬಸವಪ್ರಸಾದ ಜೊಲ್ಲೆಯವರು ಈ ಸಂಸ್ಥೆಯ ನಾಲ್ಕು ಆಧಾರಸ್ಥಂಬವಾಗಿ ಅತ್ಯುತ್ತಮ ಗುಣಮಟ್ಟದ ಪರಿಸರವನ್ನು ಒದಗಿಸಿ ಕೊಡುವುದರ ಮುಲಕ ಸಂಸ್ಥೆಯ ಕಿರ್ತಿಯನ್ನು ಸಹಸ್ರ ಗುಣ ಹೆಚ್ಚಿಸುತ್ತಿರುವುದು ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ.

ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಆತ್ಮಸ್ಥೈರ್ಯ, ಆತ್ಮವಿಶ್ವಾಸ ಪರಿಶ್ರಮ ಮತ್ತು ನಿರಂತರ ಪ್ರಯತ್ನದ ಬಗೆಗಿನ ನಂಬಿಕೆ ಗುರಿ ಹಾಗೂ ಉದ್ದೇಶಗಳ ಜೋತೆಗಿನ ಹೊಂದಾಣಿಕೆ ವೃದ್ಧಿಸುವ ಚಿಂತನೆಗಳು ಮತ್ತು ಕಾರ್ಯಗಳ ನಡುವಿನ ಸಹಸಂಬಂಧತೆಗೆ ಹೆಚ್ಚು ಒತ್ತು ನೀಡುವ ಸಂಸ್ಥಾಪಕರು ಮತ್ತು ಸಹಸಂಸ್ಥಾಪಕರು ನಮ್ಮೆಲ್ಲರಿಗೂ ಅತ್ಯುತ್ತಮ ಮಾದರಿಯಾಗಿದ್ದಾರೆ.

ಶಿಕ್ಷಣ ಹಾಗೂ ಸಹಕಾರದ ಮೂಲಕ ಸುಖ, ಶಾಂತಿ, ನೆಮ್ಮದಿ, ಸೌಹಾರ್ಧತೆ, ಪರಸ್ಪರ ಗೌರವ, ಘನತೆ, ಸ್ಥಾನಮಾನ ಮತ್ತು ಮಾನವಿಯ ಮೌಲ್ಯಗಳನ್ನು ಸಂಸ್ಥೆ ಧಾರೆಯೆರೆದು ಆರೋಗ್ಯಕರ ಸಮಾಜ, ವ್ಯಕ್ತಿತ್ವ ನಿರ್ಮಾಣ ಹಾಗೂ ವೈವಿದ್ಯಮಯ ಸಾಧನೆಗಳಿಗೆ ದಾರಿದೀಪವಾಗುತ್ತಿದೆ.

ಸ್ವಯಂ ಶಿಸ್ತು, ಸಾಮಾಜಿಕ ಶಿಸ್ತು, ಸಾಂಸ್ಕೃತಿಕ ಶಿಸ್ತು, ಆಂತರಿಕ ಮತ್ತು ಬಾಹ್ಯಿಕ ಶಿಸ್ತು ಇಂತಹ ವಿಶಿಷ್ಠ ಮೌಲ್ಯಗಳನ್ನು ಶಿಕ್ಷಕ ಮತ್ತು ವಿದ್ಯಾರ್ಥಿಗಳಲ್ಲಿ ಹಾಸುಹೊಕ್ಕಾಗಿಸಿ ವ್ಯಕ್ತಿತ್ವದ ವಿಕಾಸ, ಸಮಯ ಪ್ರಜ್ಞೆ ಹಾಗೂ ಸಮಯ ಪರಿಪಾಲನೆ ಮತ್ತು ಪ್ರಬುದ್ದತೆಗೆ ಹೆಚ್ಚಿನ ಆದ್ಯತೆ ನೀಡಿ ಮಾನವ ಸಂಪನ್ಮೂಲದಲ್ಲಿ ಜೀವ ಚೈತನ್ಯ ತುಂಬುತ್ತಿದೆ.

ಕಲಿಕೆ ಪರಿಣಾಮಕಾರಿಯಾಗಲು ಭಾಗವಿಸುವಿಕೆ ಹಾಗೂ ಪಾಲ್ಗೊಳ್ಳುವಿಕೆಯ ಮೌಲ್ಯಗಳಿಗೆ ಅವಕಾಶ ನೀಡಿ ನಮ್ಮ ಸಂಸ್ಥೆ ವೈವಿದ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ವಿದ್ಯಾರ್ಥಿಗಳ "ಪ್ರತಿಭೆ ಅನಾವರಣಗೊಳಿಸುತ್ತಿದೆ." ವಿಶೇಷವಾಗಿ ಪ್ರತಿವರ್ಷ ಜರುಗುವ ಪ್ರೇರಣಾ ಉತ್ಸವ, ಅಂತರಶಾಲಾ ಚಟುವಟಿಕೆಗಳು, ಅಂತರಮಹಾವಿದ್ಯಾಲಯ ಚಟುವಟಿಕೆಗಳು, ಕಾರ್ಯಕ್ರಮಗಳು ಹಾಗೂ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಅತ್ಯಂತ ಮುಕ್ತ ಮನಸ್ಸಿನಿಂದ, ಸ್ವ ಇಚ್ಚೇಯಿಂದ ಭಾಗವಹಿಸಿ ಸಂಸ್ಥೆಗೆ ಕೀರ್ತಿತರುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇಂತಹ ವಿಶಿಷ್ಠ ಸಾಧಕರನ್ನು ಗುರುತಿಸಿ ಅವರಿಗೆ ಸೂಕ್ತ ಸನ್ಮಾನ ಮತ್ತು ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸುವ ಪರಂಪರೆಯನ್ನು ಸಂಸ್ಥೆಯ ಸಂಸ್ಥಾಪಕರು ನಿರಂತರವಾಗಿ ಮುಂದುವರೆಯಿಕೊಂಡು ಬಂದಿರುವುದು ನಮ್ಮೆಲ್ಲರ ಸೌಭಾಗ್ಯವೇ ಸರಿ !

ನಮ್ಮ ಸಂಸ್ಥೆ ಧನಾತ್ಮಕ ಪ್ರೇರಣೆಗೆ ಹೆಚ್ಚಿನ ಮಹತ್ವ ನೀಡುತ್ತಾ ಸೋಲು ಗೆಲವುಗಳು ಸಾಧನೆಯ ಹಾದಿಯಲ್ಲಿರುವ ಎರಡು ವಿಶಿಷ್ಟ ಸವಾಲುಗಳು ಎಂಬ ಅರಿವು ಮೂಡಿಸುತ್ತಿದೆ. ಸೋಲು-ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸಿ ಪೂರಕವಾಗಿ ಪ್ರತಿಸ್ಪಂದಿಸಲು ನಮ್ಮನ್ನು ಸಿದ್ದಗೋಳಿಸುವ ಕಾರ್ಯ ನಮ್ಮ ಸಂಸ್ಥೆ ನಿರಂತರವಾಗಿ ಮಾಡುತ್ತಿದೆ. ಅದೇರಿತಿಯಾಗಿ "ಸೋಲಿನ ಅತೃಪ್ತಿ ಮುಂದೆ ಗೆಲುವಿನ ಆತ್ಮಸಂತೃಪ್ತಿಗೆ" ಕಾರಣವಾಗಬೇಕೆಂಬುವುದನ್ನು ನಮ್ಮೆಲ್ಲರಿಗೆ ಮನವರಿಕೆ ಮಾಡಿಕೊಡುವ ಮತ್ತು ಸದಾ ಎಚ್ಚರಿಸುವ ಪ್ರೇರಕ ಶಕ್ತಿಯಾಗಿದೆ ನಮ್ಮ ಜೊಲ್ಲೆ ಶಿಕ್ಷಣ ಸಂಸ್ಥೆ !!

ಪ್ರೋ. ಬಾಬಾಸಾಹೇಬ ಆರ್. ಕಾಮನಗೋಳ
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಇಡಿ.)
ಶಿಕ್ಷಣ ಮಹಾವಿದ್ಯಾಲಯ, ನಣದಿ



### ಶಿವಶಂಕರ ಜೊಲ್ಲೆ ಕನ್ನಡ ಮಾಧ್ಯಮ ಶಾಲೆಯ 2023-24 ನೇ ಸಾಲಿನ

# ಸಾಂಸ್ಕ್ರತಿಕ, ಕ್ರೀಡಾ ಹಾಗೂ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭ

ಜೊಲ್ಲೆ ಎಜ್ಯುಕೇಶನ್ ಸೊಸಾಯಟಿಯ ಅಂಗ ಸಂಸ್ಥೆಯಾದ ಶಿವಶಂಕರ ಜೊಲ್ಲೆ ಕನ್ನಡ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ **ದಿನಾಂಕ 22-07-2023** ರಂದು ಸಾಂಸ್ಕೃತಿಕ, ಕ್ರೀಡಾ ಹಾಗೂ ವಿದ್ಯಾರ್ಥಿ ಸಂಘಗಳ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಸಹಸಂಸ್ಥಾಪಕರಾದ ಶಶಿಕಲಾ ಜೊಲ್ಲೆ ಶಾಸಕರು ನಿಪ್ಪಾಣಿ, ಮಾಜಿ ಸಚಿವರು ವಹಿಸಿದ್ದರು. ಇವರು ದೀಪ ಪ್ರಜ್ವಲನೆ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ, "ಮಕ್ಕಳಿಗೆ ಮನಸ್ಸಿದ್ದರೆ ಮಾರ್ಗ ಎಂಬ ಉಕ್ತಿಯಂತೆ ವಿದ್ಯಾರ್ಥಿಗಳೆಲ್ಲರೂ ಸಂಸ್ಕಾರಯುತವಾದಂತಹ ಶಿಕ್ಷಣವನ್ನು ಗಮನದಲ್ಲಿಟ್ಟುಕೊಂಡು ಕಲಿಯುವುದು ಅವಶ್ಯಕ ಈ ನಿಟ್ಟಿನಡಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಅವಶ್ಯಕವಾದರೆ, ಸದೃಡವಾದ ದೇಹದಲ್ಲಿ ಸದೃಡವಾದ ಮನಸ್ಸು ಇರುತ್ತದೆ ಎಂಬುದಕ್ಕೆ ಪೂರಕವಾಗಿ ಪಠ್ಯದ ಜೊತೆಗೆ ಮಕ್ಕಳು ಕ್ರೀಡಾ ಮನೋಭಾವನೆಯನ್ನು ಹೊಂದುವುದು ಅವಶ್ಯವೆಂದು ತಿಳಿಸುವುದರ ಜೊತೆಗೆ ನಮ್ಮ ಸಂಸ್ಥೆಯ ಕನ್ನಡ ಶಾಲೆಯು ಕೆಲವೇ ವಿದ್ಯಾರ್ಥಿಗಳಿಂದ ಪ್ರಾರಂಭವಾಗಿ 930 ವಿದ್ಯಾರ್ಥಿಗಳಿಗೆ ಗ್ರಾಮೀಣಮಟ್ಟದಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿರುವುದು ಸಂತಸ, ನಮ್ಮ ಸಂಸ್ಥೆಯಲ್ಲಿ ಕಲಿತ ವಿದ್ಯಾರ್ಥಿಗಳು ಇಂದು ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು ಅತ್ಯಂತ ಖುಷಿ ತಂದಿದೆ" ಎಂದು ತಿಳಿಸಿದರು.

ಮುಖ್ಯ ಅಥಿತಿಗಳಾಗಿ ಎಚ್. ಎಸ್. ಖಾಡೆ ವಿಷಯ ಪರೀವಿಕ್ಷಕರು, ಉಪನಿರ್ದೇಶಕರ ಕಾರ್ಯಾಲಯ, ಚಿಕ್ಕೋಡಿ ಇವರು ವಹಿಸಿ ಮಾತನಾಡಿ "ಪ್ರಾಚೀನ ಕಾಲದಲ್ಲಿ ನೀಡುತ್ತಿದ್ದ ಶಿಕ್ಷಣವನ್ನು ಇವತ್ತು ಅನೇಕ ಪಠ್ಯೇತರ ಚಟುವಟಿಕೆಗಳ ಮೂಲಕ ಶಾಲೆಯಲ್ಲಿ ಗುಣಾತ್ಮಕ ಶಿಕ್ಷಣವನ್ನು ನೀಡುವುದು ಅವಶ್ಯಕ ಅಲ್ಲದೇ ಮಕ್ಕಳಿಗೆ ಸಂಘಗಳಲ್ಲಿ ಭಾಗವಹಿಸುವುದರೊಂದಿಗೆ ಸಮಾಜದಲ್ಲಿ ಜವಾಬ್ದಾರಿಯುತ ಪ್ರಜೆಗಳನ್ನಾಗಿ ರೂಪಿಸುವಂತಹ ಶಿಕ್ಷಣವನ್ನು ನೀಡಬೇಕೆಂದು" ಮಾರ್ಮಿಕವಾಗಿ ನುಡಿದರು.

ಈ ಸಂದರ್ಭದಲ್ಲಿ ಶಾಲಾ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು, ಶಾಲೆಯ ವಿವಿಧ ವಿಭಾಗಗಳ ವಿದ್ಯಾರ್ಥಿ ಪ್ರತಿನಿಧಿಗಳಿಗೆ ಜವಾಬ್ದಾರಿ ಹಂಚಿಕೆಯ ಪದಗ್ರಹಣ ಮಾಡಲಾಯಿತು. ಕಳೆದ ವರ್ಷದ ಎಸ್.ಎಸ್.ಎಲ್.ಸಿ.ಯ ವಾರ್ಷಿಕ ಪರೀಕ್ಷೆಯಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಸತ್ಕರಿಸಲಾಯಿತು.

ಶಾಲೆಯ ಮುಖ್ಯೋಪಾಧ್ಯಾಯರಾದ ವ್ಹಿ.ಆರ್.ಭಿವಸೆ ಪ್ರಾಸ್ತಾವಿಕವಾಗಿ ಕಾರ್ಯಕ್ರಮದ ಕುರಿತು ಮಾತನಾಡಿದರು. ಶಾಲೆಯ ಆಡಳಿತ ಮಂಡಳಿಯ ಸದಸ್ಯರುಗಳಾದ ಫೈಮಿದಾ ದಾಡಿವಾಲೆ, ಸುಜಾತಾ ಕಬಾಡೆ, ಲತಾ ವಾಳಕೆ, ಮಹಾದೇವಿ ಹುದ್ದಾರ, ಮಹಾದೇವಿ ಡೊಂಗರೆ, ಗಿರೀಜಾ ಪಾಟೀಲ, ಜೊಲ್ಲೆ ಗ್ರೂಪ್‌ನ ಸಿ.ಇ.ಓಗಳಾದ ವಿವೇಕಾನಂದ ಬಂಕೋಳ್ಳಿ, ಶಾಲೆಯ ಮುಖ್ಯೋಪಾಧ್ಯಾಯರಾದ ಎಸ್ ಜಿ ಕಾಮತ್, ಎಲ್ಲ ಶಿಕ್ಷಕ ವೃಂದದವರು, ಪಾಲಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕು. ಆಶಾ ಚವ್ಹಾಣ ಸ್ವಾಗತಿಸಿ, ದರ್ಶನ ಅಕ್ಕೋಳೆ ವಂದಿಸಿ, ಪಲ್ಲವಿ ಮಾಳಿ ನಿರೂಪಿಸಿದಳು.

# ವಿಶ್ವ ಜನಸಂಖ್ಯಾ ದಿನ -2023

ಜಾಗತಿಕ ಜನಸಂಖ್ಯೆಯ ಬೆಳವಣಿಗೆಗೆ ಸಂಬಂಧಿಸಿದ ಸವಾಲುಗಳು ಮತ್ತು ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು ಮತ್ತು ವ್ಯಕ್ತಿಗಳಿಗೆ ಶಿಕ್ಷಣ ನೀಡಲು ವಾರ್ಷಿಕವಾಗಿ ಜುಲೈ 11 ರಂದು ವಿಶ್ವ ಜನಸಂಖ್ಯಾ ದಿನವನ್ನು ಸ್ಮರಿಸಲಾಗುತ್ತದೆ . ಈ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಭೂಮಿಯ ಮೇಲಿನ ಪ್ರತಿಯೊಬ್ಬರ ಜೀವನವನ್ನು ಸುಧಾರಿಸಲು ನಿರಂತರವಾಗಿ ಕೆಲಸ ಮಾಡಲು ಇದು ಜ್ಞಾಪನೆಯಾಗಿ ಕಾರ್ಯನಿರ್ವಹಿಸುತ್ತದೆ. ವಿಶ್ವ ಜನಸಂಖ್ಯಾ ದಿನದ ಆಚರಣೆಯು ಜನಸಂಖ್ಯೆಯ ಬೆಳವಣಿಗೆಯ ಪರಿಣಾಮಗಳನ್ನು ನಿಭಾಯಿಸುವಲ್ಲಿ ತಿಳುವಳಿಕೆಯನ್ನು ಉತ್ತೇಜಿಸುವ ಮತ್ತು ಸಾಮೂಹಿಕ ಪ್ರಯತ್ನಗಳನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ.

### ವಿಶ್ವ ಜನಸಂಖ್ಯಾ ದಿನ 2023 ಥೀಮ್

ವಿಶ್ವಸಂಸ್ಥೆಯ ಪ್ರಕಾರ, ಈ ವರ್ಷದ ವಿಶ್ವ ಜನಸಂಖ್ಯಾ ದಿನದ ವಿಷಯವೆಂದರೆ - ಲಿಂಗ ಸಮಾನತೆಯ ಶಕ್ತಿಯನ್ನು ಬಿಡುಗಡೆ ಮಾಡುವುದು. ನಮ್ಮ ಪ್ರಪಂಚದ ಅನಂತ ಸಾಧ್ಯತೆಗಳನ್ನು ಅನ್ಲಾಕ್ ಮಾಡಲು ಮಹಿಳೆಯರು ಮತ್ತು ಹುಡುಗಿಯರ ಧ್ವನಿಯನ್ನು ಹೆಚ್ಚಿಸುವುದು.

### ವಿಶ್ವ ಜನಸಂಖ್ಯಾ ದಿನಾಚರಣೆಯ ಮಹತ್ವ

ವಿಶ್ವ ಜನಸಂಖ್ಯಾ ದಿನವು ಜಾಗತಿಕ ಜನಸಂಖ್ಯೆಗೆ ಸಂಬಂಧಿಸಿದ ನಿರ್ಣಾಯಕ ಸಮಸ್ಯೆಗಳತ್ತ ಗಮನ ಹರಿಸುವುದರ ಮೇಲೆ ಕೇಂದ್ರೀಕರಿಸುತ್ತದೆ. ಇದು ಲಿಂಗ ಅಸಮಾನತೆ, ಆರ್ಥಿಕ ಬಿಕ್ಕಟ್ಟುಗಳು ಮತ್ತು ಬಡತನದಂತಹ ವಿವಿಧ ಸವಾಲುಗಳ ಬಗ್ಗೆ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿದೆ. ಈ ದಿನವು ಜನರ ಜೀವನದ ಸುಧಾರಣೆಗಾಗಿ ಸಕ್ರಿಯವಾಗಿ ಶ್ರಮಿಸಲು ಮತ್ತು ಸಕಾರಾತ್ಮಕ ರೂಪಾಂತರಗಳನ್ನು ಹೆಚ್ಚಿಸಲು ಜ್ಞಾಪನೆಯಾಗಿ ಕಾರ್ಯನಿರ್ವಹಿಸುತ್ತದೆ. ಎಲ್ಲರಿಗೂ ಸಮಾನ ಅವಕಾಶಗಳು ಮತ್ತು ಅಪರಿಮಿತ ಸಾಮರ್ಥ್ಯವನ್ನು ಹೊಂದಿರುವ ಭವಿಷ್ಯವನ್ನು ರಚಿಸುವ ದೃಷ್ಟಿಯೊಂದಿಗೆ ವಿಶ್ವಸಂಸ್ಥೆಯು ವಿಶ್ವ ಜನಸಂಖ್ಯಾ ದಿನವನ್ನು ಆಚರಿಸುತ್ತದೆ. ಇದಲ್ಲದೆ, ಸುಸ್ಥಿರ ಅಭಿವೃದ್ಧಿಗಾಗಿ 2030 ರ ಕಾರ್ಯಸೂಚಿಯಲ್ಲಿ ವಿವರಿಸಿರುವ ಗುರಿಗಳಿಗೆ ಅನುಗುಣವಾಗಿ ಸುಸ್ಥಿರ ಜಗತ್ತನ್ನು ನಿರ್ಮಿಸುವ ಕಡೆಗೆ ಇದು ಕಾರ್ಯನಿರ್ವಹಿಸುತ್ತದೆ.

### ವಿಶ್ವ ಜನಸಂಖ್ಯಾ ದಿನದ ಇತಿಹಾಸ

ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದ ಆಡಳಿತ ಮಂಡಳಿಯು 1989 ರಲ್ಲಿ ವಿಶ್ವ ಜನಸಂಖ್ಯಾ ದಿನವನ್ನು ಸ್ಥಾಪಿಸಿತು, 1990 ರಲ್ಲಿ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ನಿರ್ಣಯ 45/216 ರ ಮೂಲಕ ಜನಸಂಖ್ಯೆ ಮತ್ತು ಪರಿಸರದ ಸಮಸ್ಯೆಗಳ ಬಗ್ಗೆ ಪರಸ್ಪರ ಜಾಗೃತಿ ಮೂಡಿಸಲು ವಿಶ್ವ ಜನಸಂಖ್ಯೆಯ ದಿನವನ್ನು ಆಚರಿಸಲು ನಿರ್ಧರಿಸಿತು.

ಮೊದಲ ವಿಶ್ವ ಜನಸಂಖ್ಯಾ ದಿನವನ್ನು ಜುಲೈ 11, 1990 ರಂದು 90 ಕ್ಕೂ ಹೆಚ್ಚು ದೇಶಗಳಲ್ಲಿ ಆಚರಿಸಲಾಯಿತು . ಅಂದಿನಿಂದ, ಹಲವಾರು ಸಂಸ್ಥೆಗಳು, ಮತ್ತು ಯುನೈಟೆಡ್ ನೇಷನ್ಸ್ ಪಾಪ್ಯುಲೇಶನ್ ಫಂಡ್ (UNFPA) ದೇಶದ ಕಚೇರಿಗಳು, ಸರ್ಕಾರಗಳು ಮತ್ತು ನಾಗರಿಕ ಸಮಾಜದ ಸಹಭಾಗಿತ್ವದಲ್ಲಿ, ಜನಸಂಖ್ಯೆ-ಸಂಬಂಧಿತ ಕಾಳಜಿಗಳನ್ನು ಗಮನಕ್ಕೆ ತರಲು ಈ ದಿನವನ್ನು ಗುರುತಿಸುತ್ತಿವೆ.

# ಬಸ್ಸಿನ ಜೊತೆ ನನ್ನ ಕತೆ

ಬಸ್ಸ್ ಅದು ರಥ ಅಷ್ಟೇ ಅಲ್ಲ
ಅದೊಂದು ಸುಂದರ ಭಾವನೆ...

ಅದೆಷ್ಟೋ ವಿಚಾರಗಳ ಸುರಿಮಳೆಯಿಂದ
ಆಸರೆ ಕೊಡುವ ಕೊಡೆ ಅದು...
ಅದೆಷ್ಟೇ ದುಃಖ ನೋವುಗಳಿದ್ದರೂ
ಮುಖದಲ್ಲಿ ನಗು ಮೂಡಿಸುವ ಚಿಕಿತ್ಸೆ ಅದು...
ಬಸ್ಸ್ ಅದು ರಥ ಅಷ್ಟೇ ಅಲ್ಲ
ಅದೊಂದು ಸುಂದರ ಭಾವನೆ...

ಬಡಪಾಯಿ ಭಾವನೆಗಳಿಗೆ
ಸ್ಪಂದನೆಯಾಗುತ್ತೇ ಬೇಲಿ ಹಾಕದೆ...
ಸಂತಸದ ಸಮಯದಲ್ಲೂ
ಸಹಭಾಗಿ ಆಗುತ್ತೇ ಸಂತೋಷವಾಗಿ
ಬಸ್ಸ್ ಅದು ರಥ ಅಷ್ಟೇ ಅಲ್ಲ
ಅದೊಂದು ಸುಂದರ ಭಾವನೆ...

ಮನನೊಂದು ಅಳಲು ಕಣ್ಣೀರನು
ವರೆಸುತ್ತದೆ ಸೂಸು ಗಾಳಿಯಾಗಿ...
ಮೌನದ ಹಿಂದಿನ ಮುಗಿಯಲಾರದ
ಮಾತುಗಳ ಕೇಳುತ್ತದೆ ಮನೆಯವನಾಗಿ
ಬಸ್ಸ್ ಅದು ರಥ ಅಷ್ಟೇ ಅಲ್ಲ
ಅದೊಂದು ಸುಂದರ ಭಾವನೆ...

ಮೈ ಮರೆಯುವಷ್ಟು ಮಲಗುವ
ಮಮಕಾರದ ಮಡಿಲು ಅದು..
ಮನುಜರಿಗಿಲ್ಲದ ಕರುಣೆಯ ತೋರುತಿರುವ
ನನ್ನೊಡನೆಗಿನ ಹೊಸ ಭಾಂಧವ್ಯ ಅದು
ಬಸ್ಸ್ ಅದು ರಥ ಅಷ್ಟೇ ಅಲ್ಲ
ಅದೊಂದು ಸುಂದರ ಭಾವನೆ...

– ಸಿರಿ ಕನ್ನಡತಿ

ಕು. ಶ್ರೇಯಾ ರಮಾಜೆ
ಬಿ.ಎಸ್.ಡಬ್ಲ್ಯೂ. ಅಂತಿಮ ವರ್ಷದ ವಿದ್ಯಾರ್ಥಿನಿ
ಮೌಲಾನಾ ಅಬುಲ ಕಲಾಂ ಆಝಾದ ಬಿಎಸ್‌ಡಬ್ಲ್ಯೂ/
ಎಮ್‌ಎಸ್‌ಡಬ್ಲ್ಯೂ ಮಹಾವಿದ್ಯಾಲಯ, ನಣದಿ

ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಯಕ್ಸಂಬಾ




# ವಿಶ್ವ ಪ್ರಕೃತಿ ಸಂರಕ್ಷಣಾ ದಿನ–2023

ಪ್ರಕೃತಿಯನ್ನು ಸಂರಕ್ಷಿಸುವ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ವಾರ್ಷಿಕವಾಗಿ ಜುಲೈ 28 ರಂದು ವಿಶ್ವ ಪ್ರಕೃತಿ ಸಂರಕ್ಷಣಾ ದಿನವನ್ನು ಆಚರಿಸಲಾಗುತ್ತದೆ. ಈ ದಿನವು ಪರಿಸರವನ್ನು ರಕ್ಷಿಸುವ ಮತ್ತು ನಮಗೆ ದಯಪಾಲಿಸಲಾದ ಅಮೂಲ್ಯ ಸಂಪನ್ಮೂಲಗಳನ್ನು ಸಂರಕ್ಷಿಸುವ ನಮ್ಮ ಸಾಮೂಹಿಕ ಜವಾಬ್ದಾರಿಯ ಜ್ಞಾಪನೆಯಾಗಿ ಕಾರ್ಯನಿರ್ವಹಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಸಣ್ಣ ದೈನಂದಿನ ಪ್ರಯತ್ನಗಳ ಮೂಲಕ, ನಾವು ಗ್ರಹದ ಮೇಲೆ ಸಕಾರಾತ್ಮಕ ಪರಿಣಾಮವನ್ನು ಬೀರಬಹುದು, ಅದರ ನೈಸರ್ಗಿಕ ಸೌಂದರ್ಯವನ್ನು ಮರುಸ್ಥಾಪಿಸಬಹುದು ಮತ್ತು ಎಲ್ಲಾ ಜೀವಿಗಳಿಗೆ ಆರೋಗ್ಯಕರ ಭವಿಷ್ಯವನ್ನು ಖಾತ್ರಿಪಡಿಸಿಕೊಳ್ಳಬಹುದು.

### ವಿಶ್ವ ಪ್ರಕೃತಿ ಸಂರಕ್ಷಣಾ ದಿನದ ಥೀಮ್ 2023

ವಿಶ್ವ ಪ್ರಕೃತಿ ಸಂರಕ್ಷಣಾ ದಿನದ 2023 ರ ವಿಷಯವು "ಅರಣ್ಯಗಳು ಮತ್ತು ಜೀವನೋಪಾಯಗಳು: ಜನರು ಮತ್ತು ಗ್ರಹವನ್ನು ಉಳಿಸಿಕೊಳ್ಳುವುದು." ಈ ಥೀಮ್ ಮಾನವ ಜೀವನೋಪಾಯ ಮತ್ತು ಗ್ರಹದ ಒಟ್ಟಾರೆ ಆರೋಗ್ಯ ಎರಡನ್ನೂ ಬೆಂಬಲಿಸುವಲ್ಲಿ ಅರಣ್ಯಗಳ ನಿರ್ಣಾಯಕ ಪಾತ್ರವನ್ನು ಎತ್ತಿ ತೋರಿಸುತ್ತದೆ. ಪ್ರಪಂಚದಾದ್ಯಂತ ಲಕ್ಷಾಂತರ ಜನರಿಗೆ ಆಹಾರ, ವಸತಿ ಮತ್ತು ಔಷಧದಂತಹ ಅಗತ್ಯ ಸಂಪನ್ಮೂಲಗಳನ್ನು ಒದಗಿಸುವಲ್ಲಿ ಅರಣ್ಯಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಅವು ಜೀವವೈವಿಧ್ಯದ ಯೋಗಕ್ಷೇಮ ಮತ್ತು ಪರಿಸರ ವ್ಯವಸ್ಥೆಗಳ ಸಮತೋಲನಕ್ಕೆ ಗಮನಾರ್ಹವಾಗಿ ಕೊಡುಗೆ ನೀಡುತ್ತವೆ.

### ವಿಶ್ವ ಪ್ರಕೃತಿ ಸಂರಕ್ಷಣಾ ದಿನದ ಇತಿಹಾಸ

ವಿಶ್ವ ಪ್ರಕೃತಿ ಸಂರಕ್ಷಣಾ ದಿನವು ಪ್ರಕೃತಿಯನ್ನು ರಕ್ಷಿಸುವ ಮತ್ತು ಸಂರಕ್ಷಿಸುವ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲು ಜುಲೈ 28 ರಂದು ಆಚರಿಸಲಾಗುವ ವಾರ್ಷಿಕ ಕಾರ್ಯಕ್ರಮವಾಗಿದೆ. ಈ ದಿನವನ್ನು ಮೊದಲ ಬಾರಿಗೆ 1970 ರಲ್ಲಿ ಆಚರಿಸಲಾಯಿತು ಮತ್ತು ಇದನ್ನು ಈಗ ಪ್ರಪಂಚದಾದ್ಯಂತ 100 ದೇಶಗಳಲ್ಲಿ ಆಚರಿಸಲಾಗುತ್ತದೆ.

IUCN ನಿಸರ್ಗ ಸಂರಕ್ಷಣೆಯ ಮಹತ್ವದ ಅರಿವು ಮೂಡಿಸಲು ಒಂದು ದಿನದ ಅವಶ್ಯಕತೆ ಇದೆ ಎಂದು ವಾದಿಸಿದ್ದು, ವಿಶ್ವ ಪ್ರಕೃತಿ ಸಂರಕ್ಷಣಾ ದಿನ ಹುಟ್ಟಿಕೊಂಡಿದೆ. ಮೊದಲ ವಿಶ್ವ ಪ್ರಕೃತಿ ಸಂರಕ್ಷಣಾ ದಿನವನ್ನು 1970 ರಲ್ಲಿ ಆಚರಿಸಲಾಯಿತು ಮತ್ತು ಇದು ಉತ್ತಮ ಯಶಸ್ಸನ್ನು ಕಂಡಿತು. ಈ ದಿನವನ್ನು ಪ್ರಪಂಚದಾದ್ಯಂತದ ಘಟನೆಗಳು ಮತ್ತು ಚಟುವಟಿಕೆಗಳಿಂದ ಗುರುತಿಸಲಾಗಿದೆ ಮತ್ತು ಇದು ಪ್ರಕೃತಿ ಸಂರಕ್ಷಣೆಯ ಮಹತ್ವದ ಬಗ್ಗೆ ಅರಿವು ಮೂಡಿಸಲು ಸಹಾಯ ಮಾಡಿತು. ಅಂದಿನಿಂದ, ಈ ವಿಶೇಷ ದಿನವನ್ನು ಪ್ರತಿ ವರ್ಷ ಜುಲೈ 28 ರಂದು ಆಚರಿಸಲಾಗುತ್ತದೆ.

### ವಿಶ್ವ ಪ್ರಕೃತಿ ಸಂರಕ್ಷಣಾ ದಿನದ ಮಹತ್ವ

ವಿಶ್ವ ಪ್ರಕೃತಿ ಸಂರಕ್ಷಣಾ ದಿನವು ಜುಲೈ 28 ರಂದು ಆಚರಿಸಲಾಗುವ ವಾರ್ಷಿಕ ಕಾರ್ಯಕ್ರಮವಾಗಿದೆ. ದಿನವು ಎಲ್ಲಾ ವರ್ಗಗಳ ಜನರು ಆಚರಿಸುವ ಜಾಗತಿಕ ಕಾರ್ಯಕ್ರಮವಾಗಿದೆ. ಪ್ರಕೃತಿ ಸಂರಕ್ಷಣೆಯ ಮಹತ್ವದ ಅರಿವು ಮೂಡಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ.


ಪ್ರಕೃತಿ ಸಂರಕ್ಷಣೆಯು ನೈಸರ್ಗಿಕ ಸಂಪನ್ಮೂಲಗಳು ಮತ್ತು ಪರಿಸರ ವ್ಯವಸ್ಥೆಗಳನ್ನು ರಕ್ಷಿಸುವ ಮತ್ತು ನಿರ್ವಹಿಸುವ ಅಭ್ಯಾಸವಾಗಿದೆ. ಇದು ಮುಖ್ಯವಾಗಿದೆ ಏಕೆಂದರೆ ಪ್ರಕೃತಿಯು ನಮಗೆ ಶುದ್ಧ ಗಾಳಿ ಮತ್ತು ನೀರು, ಆಹಾರ ಮತ್ತು ಔಷಧದಂತಹ ಅನೇಕ ಪ್ರಯೋಜನಗಳನ್ನು ಒದಗಿಸುತ್ತದೆ. ಇದು ಹವಾಮಾನವನ್ನು ನಿಯಂತ್ರಿಸಲು ಮತ್ತು ನೈಸರ್ಗಿಕ ವಿಪತ್ತುಗಳಿಂದ ನಮ್ಮನ್ನು ರಕ್ಷಿಸಲು ಸಹಾಯ ಮಾಡುತ್ತದೆ. ವಿಶ್ವ ಪ್ರಕೃತಿ ಸಂರಕ್ಷಣಾ ದಿನವು ಪ್ರಕೃತಿ ಸಂರಕ್ಷಣೆ ಎದುರಿಸುತ್ತಿರುವ ಸವಾಲುಗಳ ಬಗ್ಗೆ ತಿಳಿದುಕೊಳ್ಳಲು ಮತ್ತು ನಮ್ಮ ನೈಸರ್ಗಿಕ ಪ್ರಪಂಚವನ್ನು ರಕ್ಷಿಸಲು ಕ್ರಮ ತೆಗೆದುಕೊಳ್ಳಲು ಒಂದು ಅವಕಾಶವಾಗಿದೆ.




ಬಸವಜ್ಯೋತಿ ಪದವಿ ಮಹಾವಿದ್ಯಾಲಯ ಮತ್ತು ಡಾ. ಅಬುಲ್ ಕಲಾಂ ಆಝಾದ ಬಿ.ಎಸ್.ಡಬ್ಲ್ಯೂ/ಎಮ್.ಎಸ್.ಡಬ್ಲ್ಯೂ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ಏಳು ದಿನಗಳ ಕಲರವ ಸಾಂಸ್ಕೃತಿಕ ಹಬ್ಬ ಸಮಾರೋಪ ಕಾರ್ಯಕ್ರಮದಲ್ಲಿ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಇನ್ನೂರು ಅಡಿಯ ಉದ್ದದ ಕನ್ನಡ ಬಾವುಟದ ಭವ್ಯ ಮೆರವಣಿಗೆ ಚಾಲನೆ ನೀಡುತ್ತಿರುವುದು.




ನವದೆಹಲಿಯಲ್ಲಿ ಭಾರತದ ವಿದೇಶಾಂಗ ಸಚಿವರಾದ ಶ್ರೀ ಡಾ. ಎಸ್. ಜಯಶಂಕರ ಹಾಗೂ ಕೇಂದ್ರ ಗಣಿ, ಕಲ್ಲಿದ್ದಲು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಪ್ರಲ್ಹಾದ ಜೋಶಿ ಅವರನ್ನು ಜೊಲ್ಲೆ ದಂಪತಿ ಸೌಹಾರ್ದಯುತವಾಗಿ ಭೇಟಿ ಮಾಡಿದ ದೃಶ್ಯ.




ನವದೆಹಲಿಯಲ್ಲಿ ಕೇಂದ್ರ ರೈಲ್ವೆ ಸಚಿವರಾದ ಶ್ರೀ ಅಶ್ವಿನಿ ವೈಷ್ಣವ್ ಅವರನ್ನು ಜೊಲ್ಲೆ ದಂಪತಿ ಭೇಟಿ ಮಾಡಿ ಬಹುದಿನಗಳಿಂದ ಬಾಕಿ ಉಳಿದಿರುವ ಕರಾಡ–ನಿಪ್ಪಾಣಿ–ಬೆಳಗಾವಿ ರೈಲು ಮಾರ್ಗದ ಕಾಮಗಾರಿಯನ್ನು ಆರಂಭಿಸಿ ಪೂರ್ಣಗೊಳಿಸುವಂತೆ ಜೊಲ್ಲೆ ದಂಪತಿ ಮನವಿ ಪತ್ರ ನೀಡುತ್ತಿರುವ ದೃಶ್ಯ.




ನಿಪ್ಪಾಣಿ ನಗರದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಕರ್ನಾಟಕ ಪಬ್ಲಿಕ್ ಶಾಲೆ ನಿಪ್ಪಾಣಿ ಇವರ ಸಂಯುಕ್ತ ಆಶ್ರಯದಲ್ಲಿ ವಿದ್ಯಾರ್ಥಿಗಳಿಗೆ ಕ್ರೀಡಾ ಸಾಮಗ್ರಿ ವಿತರಣೆ, ಉಚಿತ ಸಮವಸ್ತ್ರ ವಿತರಣೆ ಕಾರ್ಯಕ್ರಮದಲ್ಲಿ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ವಿತರಿಸುತ್ತಿರುವುದು.





ನಿಪ್ಪಾಣಿ ನಗರದಲ್ಲಿ ಅಧಿಕ ಶ್ರಾವಣ ಮಾಸದ ನಿಮಿತ್ತ ಶ್ರೀ ಸದ್ಗುರು ಸಾಯಿಬಾಬಾ ಜೀವನ ದರ್ಶನ ಮತ್ತು ಪ್ರವಚನ ಕಾರ್ಯಕ್ರಮದಲ್ಲಿ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಭಾಗವಹಿಸಿ ದೇವರ ದರ್ಶನ ಪಡೆದುಕೊಳ್ಳುತ್ತಿರುವ ದೃಶ್ಯ




ಶ್ರೀ ಸಿದ್ದಗಂಗಾ ಮಠದ ಪೀಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿ ಯವರ ಜನ್ಮದಿನದ ನಿಮಿತ್ಯ ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು ಭೇಟಿ ಮಾಡಿ, ಶುಭಾಶಯ ಕೋರಿ, ದಿವ್ಯಾಶೀರ್ವಾದ ಪಡೆದುಕೊಳ್ಳುತ್ತಿರುವ ದೃಶ್ಯ.




ಆಶಾಜ್ಯೋತಿ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಯವರು ಆಶಾಜ್ಯೋತಿ ವಿಶೇಷ ಮಕ್ಕಳ ವಸತಿ ಶಾಲೆಯಲ್ಲಿ ಗುರುವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿಧ್ಯಾರ್ಥಿಗಳಿಗೆ ಸಿಹಿ ಹಂಚುತ್ತಿರುವ ದೃಶ್ಯ.




ಮಾಂಗುರ ಕ್ರಾಸ್ ಓವರ್ ಬ್ರಿಡ್ಜ್ ಕಾಮಗಾರಿ ಪ್ರಗತಿಯಲ್ಲಿದ್ದು, ಸ್ಥಳಕ್ಕೆ ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು ಭೇಟಿ ನೀಡಿ, ಕಾಮಗಾರಿಯನ್ನು ವಿಕ್ಷಿಸುತ್ತಿರುವ ದೃಶ್ಯ.



ಪ್ರಧಾನ ಸಂಪಾದಕರು :– ಸೌ. ಸುಧಾ ಡಿ. ಪಾಟೀಲ, ಉಪನ್ಯಾಸಕರು, ಕನ್ನಡ ವಿಭಾಗ